ಕ್ರ.ಸಂ.	ಜಿಲ್ಲೆ	(ರೂ.ಲಕ್ಷಗಳಲ್ಲಿ)
1	ಬೆಳಗಾಂ	3918.36
2	ಚಿತ್ರದುರ್ಗ	2626.44
3	ಚಿಕ್ಕಮಗಳೂರು	3066.68
4	ಹಾಸನ	3840.00
5	ಶಿವಮೊಗ್ಗ	3301.68
6	ಕೊಡಗು	1246.80
	ಒಟ್ಟು	**17999.86**

ಈ) ಇಲ್ಲ.

ಉ) ಈ ಯೋಜನೆಗೆ ನಬಾರ್ಡ್ ಸಂಸ್ಥೆಯಿಂದ RIDF ಯೋಜನೆಯಡಿ ಶೇ.80%ರ ಸಾಲದ ರೂಪದಲ್ಲಿ (14400.00 ರೂ.ಲಕ್ಷ) ಹಾಗೂ ರಾಜ್ಯ ಸರ್ಕಾರದಿಂದ ಶೇ.20% (3600.00 ರೂ. ಲಕ್ಷ) ಅನುದಾನ ರೂಪದಲ್ಲಿ ವೆಚ್ಚ ಭರಿಸಲಾಗುತ್ತದೆ.

ಊ) 5 ವರ್ಷ ಕಾರ್ಯಕ್ರಮವಾಗಿದ್ದು, 2008–09ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, 2012–13ನೇ ಅಂತ್ಯಕ್ಕೆ ಸಂಪೂರ್ಣವಾಗಿ ಅನುದಾನವನ್ನು ಬಳಸಿಕೊಳ್ಳಲಾಗುವುದು.

708 ಶ್ರೀ ಬಂಡೆಪ್ಪ ಕಾಶ್ಯಂಪೂರ್: ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜು ಪ್ರಾರಂಭವಾಗಿರುವುದು ನಿಜವೇ; ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದೆ;

ಆ) ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸ್ವಂತ ಕಟ್ಟಡವನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ತೋಟಗಾರಿಕಾ ಕಾಲೇಜು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಇದಕ್ಕೆ ನಿಗದಿಪಡಿಸಿರುವ ಬಾಡಿಗೆ ಮೊತ್ತ ಎಷ್ಟು;

ಉ) ಅಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಯಾವ ಮಾನದಂಡದ ಮೇಲೆ ನೇಮಿಸಿಕೊಳ್ಳಲಾಗಿದೆ;

ಊ) ಇತ್ತೀಚೆಗೆ ಕೆಲವು ನೌಕರರನ್ನು ಕೆಲಸದಿಂದ ವಜಾಗೊಳಿಸಿ ಹೊಸದಾಗಿ ನೇಮಕ ಮಾಡಿಕೊಂಡಿರುವುದು ನಿಜವೇ;

ಋ) ಹಾಗಿದ್ದಲ್ಲಿ, ಹೊಸದಾಗಿ ನೇಮಕ ಮಾಡಿಕೊಳ್ಳಲು ಅನುಸರಿಸಿರುವ ಮಾನದಂಡಗಳೇನು?

ಶ್ರೀ (ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು):

ಅ) ಹೌದು. ಹಳ್ಳದಕೆರೆಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಆ) ಹೌದು. ಕ್ರಮಕೈಗೊಳ್ಳಲಾಗುತ್ತಿದೆ.

ಇ) ಹೌದು.

ಈ) ತಿಂಗಳಿಗೆ ರೂ. 38,000/–ಗಳು.

ಉ) ಕೃಷಿ ವಿಶ್ವವಿದ್ಯಾಲಯ ಧಾರವಾಡ ಮತ್ತು ಬೆಂಗಳೂರಿನಿಂದ ನಿಯೋಜನೆ ಅಥವಾ ವರ್ಗಾವಣೆ ಮೂಲಕ ನೇಮಿಸಿಕೊಳ್ಳಲಾಗಿದೆ.

ಊ) ಇಲ್ಲ.

ಋ) ಉದ್ಭವಿಸುವುದಿಲ್ಲ.